ದೇಗುಲವಾದಾಗ ಗೋಪಿನಾಥನ್ ಕಮಿಟಿಯ ಅಧ್ಯಕ್ಷರಾದರು. ನಾಟಕದಲ್ಲಿ ಅಭಿನಯಿಸದೇ ಇದ್ದರೂ ಚಂಗನಾಶ್ಶೇರಿ, ಕೊಲ್ಲಂಗಳಿಂದ ಕಚಗುಳಿಯಿಡುವ ನಾಟಕ ತಂಡಗಳಿಗೆ ವೇದಿಕೆ ಒದಗಿಸಿಕೊಟ್ಟರು. ಕೇರಳದ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳೂ ವೇದಿಕೆಯೇರುತ್ತಿದ್ದವು.

ಬನ ದೇವಸ್ಥಾನವಾದಾಗ ಪಂಚಾರಪೆಯಿಲಿನ ಮಸೀದಿ ಹೊಳಪು ಕಂಡಿತು. ಮಸೀದಿಯನ್ನು ದೊಡ್ಡದಾಗಿ ಕಟ್ಟಲು ಗಲ್ಫ್ ರಾಷ್ಟ್ರಗಳಿಂದ ದೇಣಿಗೆಯ ಮಹಾಪೂರವೇ ಹರಿದುಬಂತು. ಮಸೀದಿಯ ಸುತ್ತಲಿನ ಭಾಗದಲ್ಲಿ ಧರ್ಮಗುರುಗಳ ಪ್ರವಚನ ಕೇಳಲು ಬುರ್ಖಾ ಹಾಕಿದ ಹೆಣ್ಣುಕ್ಕಳು ಸಾಲಾಗಿ ಶಿಸ್ತಿನಿಂದ ಕುಳಿತುಕೊಳ್ಳುತ್ತಿದ್ದರಂತೆ.

ಬನದ ಸಮೀಪದ ಕಲ್ಯಾಣಿ ಈಗ ಪದ್ಮತೀರ್ಥವಾಗಿದೆ. ಹಿಂದೆ ಬನದಲ್ಲಿ ಗುಳಿಗನನ್ನು ಕಟ್ಟಿ ಆಡಿಸುತ್ತಿದ್ದರು. ಆ ಕಾಲದಲ್ಲಿ ಉದ್ದಕ್ಕೆ ಬೆಳೆದ ಒಂದು ಹಾಲೆ ಮರದ ಕೆಳಗೆ ಒಂದು ಪವಿತ್ರ ಕಲ್ಲು ಮತ್ತು ಕಾಲುದೀಪ ಮಾತ್ರವಿರುತ್ತಿತ್ತು. ಆದರೆ ಇಂದು ಬನ ವಿಷ್ಣು ದೇಗುಲವಾಗಿದೆ. ಹೆಣ್ಮಕ್ಕಳು ಅದನ್ನು ಶ್ರೀ ಕೃಷ್ಣಪರಮಾತ್ಮನ ದೇವಸ್ಥಾನವೆಂದು ಹೇಳುತ್ತಿದ್ದಾರೆ. ಕೈಮುಗಿದು ದರ್ಶನ ಪಡೆಯಲು ಬರುವವರನ್ನು ಗೋಪಾಲಕ ಮತ್ತು ಗೋಪಿಕೆಯೆಂದು ಕರೆಯುತ್ತಿದ್ದರಂತೆ. ಉತ್ಸವದ ಸಮಯದಲ್ಲಿ ಮೈಕ್‌ನ ಮೂಲಕ ಹೀಗೆ ಘೋಷಿಸುತ್ತಿದ್ದರು.

'ಬಲ ಬದಿಯಲ್ಲಿ ನಿಲ್ಲುವ ಗೋಪಾಲಕರು, ಗೋಪಿಕೆಯರಿಗೆ ಇತರರು ದಾರಿ ಬಿಟ್ಟುಕೊಡಬೇಕು. ಹಿಂದೆ ನಿಂತಿರುವ ಗೋಪಾಲಕರು ನೆಲದ ಮೇಲೆ ಕುಳಿತಿರಬೇಕು. ಕ್ಷೇತ್ರದ ಮಹಿಮೆಯನ್ನು ಬಿತ್ತರಿಸುವ ಒಂದು ಲಘು ಕಾವ್ಯವನ್ನು ಸ್ಥಳೀಯ ಮಹಾಕವಿ ಪಿ.ಕೆ. ಪುದುಸ್ಸೇಂ ರಚಿಸಿ ಹಾಡಿಸಿ ಕ್ಯಾಸೆಟ್ಟನ್ನು ಮಾಡಿಸಿದ್ದಾರೆ.'

ಮಸೀದಿಯಲ್ಲಿ ಉರೂಸ್ ಪ್ರಾರಂಭವಾಗಿದೆಯೆಂತೆ. ಹಿಂದೆ ಮಸೀದಿಗೆ ಬಂದು ನೆಲೆ ನಿಂತ ಒಬ್ಬ ಮುಸ್ಲಿಂ ಮುದುಕನಿದ್ದ. ಆತ ಒಂದು ಹರಿವಾಣದಲ್ಲಿ ಕೆಲವು ಮಂತ್ರಗಳನ್ನು ಬರೆದುಕೊಟ್ಟಿದ್ದನಂತೆ. ಅದನ್ನು ತೊಳೆದು ಆ ನೀರನ್ನು ಕುಡಿದರೆ ಕೆಲವು ತೀವ್ರ ಕಾಯಿಲೆಗಳು ವಾಸಿಯಾಗುತ್ತಿದ್ದವಂತೆ. ಅದೇ ಹರಿವಾಣದಲ್ಲಿ ಅನ್ನ, ಮಾಂಸದ ಸಾರನ್ನು ಬಡಿಸಿ ರುಮಾಲಿನಿಂದ ಮುಚ್ಚಿಕಟ್ಟಿ ಮುದುಕನಿಗೆ ಉಣಿಸಲು ಅಮ್ಮಂದಿರು ಮಕ್ಕಳನ್ನು ಮಸೀದಿಗೆ ಕಳುಹಿಸುತ್ತಿದ್ದರು. ಮಾಪಿಳ್ಳೆ (ಮುಸ್ಲಿಂ ಗಂಡಸರು) ಮಯ್ಯತ್ತಾದಾಗ ಪವಾಡಗಳು ಹೆಚ್ಚಾದವು. ಕಬರಿನ ಮೇಲಿನಿಂದ ಬೆಂಕಿಯ ಗೋಳವೊಂದು ಸುತ್ತುತ್ತಿದ್ದುದನ್ನು, ಅಂಗಡಿಯನ್ನು ಮುಚ್ಚಿ ಬರುತ್ತಿದ್ದ ಭಾಸ್ಕರಣ್ಣನಂತೆ ಮೊದಲು ನೋಡಿದ್ದು. ಅನಂತರ ಪವಾಡದ ಕತೆಗಳು ಹೆಚ್ಚಾಗ ತೊಡಗಿದವು. ಮಸೀದಿಯ ಮುಂದೆ ದರ್ಗಾವೊಂದು ಹುಟ್ಟಿಕೊಂಡಿತು. ಬಸ್ಸಿನಲ್ಲಿ ಪ್ರಯಾಣಿಸುವವರು ದರ್ಗಾದತ್ತ ನಾಣ್ಯಗಳನ್ನು ಎಸೆದರು. ಭವಿಷ್ಯತ್ತಿನಲ್ಲಿ ಪವಾಡ ತೋರಿಸಲಿರುವ ಒಬ್ಬ ಮುದುಕ ಬಿದ್ದ ನಾಣ್ಯಗಳನ್ನು ಸಂಗ್ರಹಿಸುತ್ತಿದ್ದ.

ಅಧ್ಯಾಯ ಹದಿನಾರು

ಮಾಹೆ ನದಿ ತೀರದ ಗಸ್ತೋನ್ ಸಾಹೇಬ (ಖ್ಯಾತ ಕಾದಂಬರಿಕಾರ ಎಂ. ಮುಕುಂದನ್‌ರವರ ಕಾದಂಬರಿಯ ಕಥಾಪಾತ್ರ). ನಂತೆ ನಾನೂ ಉದ್ದನೆಯ ತೋಳಿನ ಶರ್ಟು ತೊಟ್ಟು, ಅಗಲ ಜರಿ ಪಂಚೆಯನ್ನುಟ್ಟು ದಪ್ಪನೆಯ ಚಿನ್ನದ ಚೈನನ್ನು ಹೊರಕ್ಕೆ ಕಾಣಿಸುವಂತೆ ಶರ್ಟಿನ ಎರಡು ಗುಂಡಿಗಳನ್ನು ಬಿಚ್ಚಿ, ತೀಕ್ಷ್ಣ ವಾಸನೆಯ ಪರಫ್ಯೂಮನ್ನು ಹಚ್ಚಿ ಒಂದು ಸಂಜೆ ಹೊರಬಿದ್ದೆ.

ನನಗೆದುರಾಗಿ ಬಂದ ನನ್ನ ಸಮವಯಸ್ಕರನ್ನು ನಾನು ಗುರುತಿಸಿದೆ. ವಯಸ್ಸಾದವರ ಬೋಡು ತಲೆಯಲ್ಲಿ ಕೂದಲು ನೆಯ್ದು ಕಟ್ಟಿದ್ದರೂ, ನರೆತಗೂದಲನ್ನ ಡೈ ಮಾಡಿ ಕಲ್ಪಿಸಿಕೊಂಡಾಗ ಅವರ ಗುರುತೂ ಹತ್ತಿತು. ಶೇಕಡಾ ಇಪ್ಪತ್ತಕ್ಕಿಂತಲೂ ಹೆಚ್ಚಿನ ಮಂದಿ ಬೇರೆ ಬೇರೆ ಊರುಗಳಿಂದ ಬಂದವರೆಂದು ತೋರಿತು. ಒಬ್ಬರಾದರೂ ನನ್ನನ್ನು ಗುರುತಿಸಲಿಲ್ಲವೆಂದು ತಿಳಿದು ಅಚ್ಚರಿಯೆನಿಸಿತು. ಅಪರಿಚಿತರ ಪೈಕಿ ಒಬ್ಬನಾಗಿ ನನ್ನನ್ನು ಅವರು ಕಡೆಗಣಿಸಿ ಅವರವರ ಗದ್ದಲದಲ್ಲಿ ಮಗ್ನರಾದರು.

ವಾಚನಾಲಯದಿಂದ ಹೊಸದೇಗುಲದ ತನಕ ನಾನು ನಡೆದೆ. ಇಬ್ಬರು ಯುವಕರು ನನ್ನ ಹಿಂದೆ ಬಿದ್ದಿದ್ದಾರೆಂದು ನನಗನ್ನಿಸಿತು. ತಕ್ಷಣ ನಾನು ಮನೆಯತ್ತ ನಡೆದೆ. ಬಳಸುದಾರಿಯಲ್ಲಿ ನಾನು ಮನೆ ತಲುಪಿದೆ. ಎಲ್ಲಿಂದಲೋ ನನ್ನನ್ನು ಹಿಂಬಾಲಿಸಿದವರು ನನ್ನನ್ನು ಬಿಟ್ಟುಬಿಟ್ಟಿದ್ದರು. ಬಹುಶಃ ಅದು ನನ್ನ ಭ್ರಮೆಯಿರಬೇಕು. ಮರುದಿನ, ಅತ್ತೆಯ ದೂರದ ಸಂಬಂಧಿಯೊಬ್ಬರು ತೀರಿಕೊಂಡ ಕಾರಣ ಅತ್ತೆ ಮುತ್ತಾಜ್ಜಿ ಮಲೆಯ ತಪ್ಪಲಿಗೆ ಹೋಗಬೇಕಾಯಿತು. ಸುಮಿತ್ರಳನ್ನು ಒಂಟಿಯಾಗಿ ಭೇಟಿಯಾಗಲು ಕಾಯುತ್ತಿದ್ದೆ. ಯಾಂತ್ರಿಕವಾಗಿ ಬೆಳಗಿನ ಉಪಹಾರವನ್ನು ಅವಳೇ ನನಗೆ ಬಡಿಸಿದಳು. ಹಬೆಯಲ್ಲಿ ಬೆಂದ ಪುಟ್ಟು, ಕಡಲೆಕಾಳಿನ ಸಾರು, ಹಳೆಯ ನೆನಪುಗಳನ್ನು ಮರುಕಳಿಸುವಂತೆ ಮಾಡಿತು. ಪುಟ್ಟು ಇದ್ದ ಭಾಗದ ಬೆಂದು ಬಾಡಿದ ಬಾಳೆಯೆಲೆಯೂ ನನ್ನ ಮನಸ್ಸನ್ನು ಸೆಳೆಯಿತು.

'ಸುಮೀ...' ನಾನು ಕರೆದೆ. ಬಹಳ ವರ್ಷಗಳಿಂದ ಆ ಕರೆಗೆ ಕಾಯುತ್ತಿದ್ದಿರಬೇಕು. ಆದರೆ ನನ್ನ ಕರೆ ಅವಳಿಗೆ ಕೇಳಿಸಲಿಲ್ಲ. ತಲೆಯೆತ್ತಲೂ ಇಲ್ಲ. ಉಪಹಾರ ಬಡಿಸಿ ಗೋಡೆಯ ಹಿಂದೆ ಮರೆಯಾದಳು. ಮಧ್ಯಾಹ್ನದ ಊಟವೂ ಇದೇ ರೀತಿಯಲ್ಲಿ ನಡೆಯಿತು. ಮಾವಿನಕಾಯಿಯನ್ನು ಸಣ್ಣಗೆ ಕತ್ತರಿಸಿ ಮಾಡಿದ ಪಚ್ಚಡಿ (ಚಟ್ನಿ) ಮತ್ತು ಹಲಸಿನ ಬೀಜ ಬೇಯಿಸಿ ತೆಂಗಿನೆಣ್ಣೆ ಹಾಕಿದ ಹಳದಿ ಬಣ್ಣದ ಸಾರಿನಲ್ಲಿ ಅವಳ ಪ್ರೀತಿಯನ್ನು ಸವಿದು ನೋಡಿದೆ. ಅವು ನನ್ನ ಇಷ್ಟದ ಪದಾರ್ಥಗಳಾಗಿದ್ದವು.

ಅತ್ತೆ ಸಂಜೆ ಹಿಂತಿರುಗಿದರು. ಸುಮಿತ್ರಳೊಂದಿಗೆ ಮಾತನಾಡಬೇಕೆಂದೆನಿಸಿದರೂ ಸಾಧ್ಯವಾಗಲಿಲ್ಲ. ಅವಕಾಶ ಕಳೆದ ನಂತರ ಪಶ್ಚಾತ್ತಾಪಪಡುವ ಸ್ವಭಾವವಲ್ಲವೆ ನನ್ನದು!

ಅಂದು ರಾತ್ರೆ ನಾನು ನಿದ್ರಿಸಲಿಲ್ಲ. ಪ್ರೇಂನಜೀರ್, ಸತ್ಯನ್ ನಾಯಕ ನಟರಾಗಿ ನಟಿಸಿದ ಚಿತ್ರಗಳು ಮನಸ್ಸಿನೊಳಗೆ ಪ್ರವೇಶಿಸಿದವು. ವಿಲಾಪ ಗೀತೆಗಳು ಒಂದೊಂದಾಗಿ ನೆನಪಾದವು. ಅನಂತರ ಒಂದು ಪತ್ರದ ರೂಪದಲ್ಲಿ ಮನಸ್ಸಿನೊಳಗಿನ ದುಗುಡ ದುಮ್ಮಾನಗಳು ಹೊರಬಿದ್ದವು. ಪ್ರೇಮಗೀತೆಗಳ, ವಿರಹಗೀತೆಗಳ, ಶೋಕ ಗೀತೆಗಳ ಸಂಕಲನವಾಗಿತ್ತು ಆ ಪತ್ರ. ಸುಂದರವಾದ ಹಸ್ತಾಕ್ಷರದಲ್ಲಿ ಆ ಪತ್ರ ಕಿರುಕಾದಂಬರಿಯ ರೂಪ ಪಡೆಯಿತು. ಕಳೆದ ಕಾಲದ ಕಿರುಚಿತ್ರವನ್ನು ಅದರಲ್ಲಿ ನಿರೂಪಿಸಲಾಗಿತ್ತು. ನಾನು ಹಿಂದೆಯೇ ಒಬ್ಬ ಕತೆಗಾರನಾಗಿರಬೇಕಿತ್ತೆಂದು ಪತ್ರದ ಪುನರ್ ವಾಚನದಲ್ಲಿ ತಿಳಿಯಿತು.

ಪತ್ರವೇನೋ ಬರೆದೆ. ಆದರೆ ಅದನ್ನು ಸುಮಿತ್ರ ಸ್ವೀಕರಿಸದೇ ಹೋದರೆ ಎಂಬ ಆತಂಕ ನನ್ನನ್ನು ಕಾಡತೊಡಗಿತು. ಒಂದು ಗೋಡೆಯಾಚೆ ಮರೆಯಾಗುವುದರ ನಡುವೆ ನಾನು ಆ ಪತ್ರವನ್ನು ಅವಳ ಕೈಯಲ್ಲಿಟ್ಟೆ. ಈಗ ಅತ್ತು ಬಿಡಬಹುದೆಂಬ ಭಾವದಲ್ಲಿ ಅವಳನ್ನೇ ದಿಟ್ಟಿಸಿದೆ. ಪತ್ರವನ್ನು ಓದಲು ಅವಳಿಗೆ ಸಾಕಷ್ಟು ಸಮಯ ಕೊಟ್ಟೆ. ಒಂದು ಸಂಜೆ ಅವಳನ್ನು ಕೇಳಿದೆ, 'ಸುಮಿ, ಪತ್ರ ಓದಿದೆಯಾ?'

ಅವಳು ಮಾತನಾಡಲಿಲ್ಲ. ನನ್ನ ಜೀವನದಲ್ಲೇ ಒಂದು ಸೃಜನಾತ್ಮಕ ಸೃಷ್ಟಿಯಾಗಿತ್ತು ಆ ಪತ್ರ. ಅದನ್ನು ಓದಿಲ್ಲವೆಂದು ಹೇಳುವಳೆ? ಅಷ್ಟಕ್ಕೆ ಸುಮ್ಮನಾಗದೆ ನಾನು ಮುಂದಿನ ಟ್ರಂಪ್‌ಕಾರ್ಡನ್ನು ಹೊರತೆಗೆದೆ.

'ಸುಮಿ, ಕ್ಷಮಿಸು. ಯಾವುದನ್ನು ಬೇಕಂತ ಮಾಡಿದ್ದಲ್ಲ'

ಅಣೆಕಟ್ಟು ಬಿರಿದು ನೀರಿನ ಪ್ರವಾಹ ಹೊರಬರುವಂತೆ ಅವಳು ಗಟ್ಟಿಯಾಗಿ ಅಳತೊಡಗಿದಳು. ಅಳುವಿನ ಧ್ವನಿ ತಾರಕಕ್ಕೇರಿದಾಗ ನಾನವಳನ್ನು ಮುಟ್ಟಿದೆ. ಸಮಾಧಾನದಿಂದ ಅವಳ ತೋಳನ್ನು ಸವರಿದೆ. ನಂಬಿಕೆಯನ್ನು ಖಚಿತಪಡಿಸಲು ಬೇಕೆಂದೇ ಅದುಮಿದೆ.

'ತಿರುಗಿ ಬಂದ್ರಲ್ಲ, ಅಷ್ಟು ಸಾಕು' ಅಷ್ಟು ಹೇಳಿ ಅವಳು ಒಳಗೆ ಹೋದಳು.ಆಸೆ ಹುಟ್ಟುಹಾಕುವ ಉತ್ತರವಾಗಿತ್ತು. ಭವಿಷ್ಯದ ಬಗ್ಗೆ ಹಲವಾರು ಚಿಂತನೆಗಳನ್ನು ಹೆಣೆಯುತ್ತಾ ನಾನು ನಿದ್ರಿಸಿದೆ. ಏನೇನೋ ಕನಸುಗಳು ದಾಂಗುಡಿಯಿಟ್ಟವು. ಎಚ್ಚರಗೊಂಡಾಗ ತಡವಾಗಿತ್ತು. ಕಂಡ ಕನಸುಗಳು ಯಾವುವೂ ನೆನಪಿರಲಿಲ್ಲ. ಎಲ್ಲಾ ಬಣ್ಣಗಳು ಸೇರಿ ಒಂದು ಬಿಳಿಯ ಬಣ್ಣ ಮಾತ್ರ.

'ಸುಮಿ ಎಲ್ಲವನ್ನೂ ನನ್ನಲ್ಲಿ ಹೇಳಿಕೊಂಡಿದ್ದಾಳೆ' ಅತ್ತೆ ಹೇಳಿದರು. ಏನು ಹೇಳಿದಳೆಂದು ನಾನು ಕೇಳಲಿಲ್ಲ. ಅದಕ್ಕೆ ಅತ್ತೆಯೇ ಉತ್ತರಿಸಿದರು.

'ಇನ್ನು ನೀನು ಇಲ್ಲೇ ಇರ್ತೀಯಲ್ಲ... ಊರಿನಿಂದ ನೀನು ನಾಪತ್ತೆಯಾಗಿದ್ದರೂ ಸುಮಿತ್ರಳಿಂದ ನಿನಗೆ ಓಡಿ ಹೋಗಲು ಸಾಧ್ಯವಿಲ್ಲವಲ್ಲ.'

ಗಲಭೆಗಳಿಲ್ಲದ, ಸಂಘರ್ಷಗಳಿಲ್ಲದ ಊರಿನಿಂದೇಕೆ ನಾವು ಓಡಬೇಕು? ಅಗತ್ಯವೆನಿಸಿದರೆ ಸುಮಿತ್ರಳ ಜೊತೆ ಎರಡು ಹೊತ್ತು ದೇಗುಲಕ್ಕೆ ಹೋಗಬಹುದು. ರಸ್ತೆಬದಿಯಲ್ಲಿ ಒಂದು ಅಂಗಡಿಯನ್ನು ಇಡಬಹುದು.

(ಸಶೇಷ)